ಹೊತ್ತಿಗೆ 10 ಕೋಟಿ ಪ್ರಯಾಣಿಕರ ಗುರಿಯನ್ನು ತಲುಪಲಿದೆ. ಹೀಗಾದಲ್ಲಿ ಜಗತ್ತಿನ ಅತ್ಯಂತ ಜನದಟ್ಟಣೆಯ ವಿಮಾನ ನಿಲ್ದಾಣ ಎಂಬ ಹೆಗ್ಗಳಿಕೆಗೆ ದೆಹಲಿ ಪಾತ್ರವಾಗಲಿದೆ. ಅಮೆರಿಕದ ಅಟ್ಲಾಂಟಾ ವಿಮಾನ ನಿಲ್ದಾಣ ಸದ್ಯ ಅಗ್ರಸ್ಥಾನದಲ್ಲಿದೆ. ದೆಹಲಿ ಮಾತ್ರವಲ್ಲ, ಬೆಂಗಳೂರಿನಲ್ಲಿರುವ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು 2035ರ ಹೊತ್ತಿಗೆ 9ರಿಂದ 10 ಕೋಟಿ ಪ್ರಯಾಣಿಕರ ಹೊರೆಯನ್ನು ನಿಭಾಯಿಸಬೇಕಿದೆ.

ಬೇಡಿಕೆಯ ಪರಿಣಾಮವಾಗಿ ವಿಮಾನಯಾನ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳೂ ಹೆಚ್ಚಾಗಿವೆ. 2023ರ ಹೊತ್ತಿಗೆ 2.5 ಲಕ್ಷ ಜನರು ಈ ಕ್ಷೇತ್ರದಿಂದ ನೇರ ಉದ್ಯೋಗ ಪಡೆದಿದ್ದಾರೆ. ಈ ಕ್ಷೇತ್ರದಲ್ಲಿ ಇನ್ನೂ ಒಂದು ಲಕ್ಷ ಉದ್ಯೋಗ ಅವಕಾಶ ಸೃಷ್ಟಿಯಾಗುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗಿದೆ.

## ಮಹಾನಗರಗಳ ನಿಲ್ದಾಣಗಳಲ್ಲಿ ದಟ್ಟಣೆ

ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ವಾಯುಯಾನ ಸೌಕರ್ಯಗಳು ಹೆಚ್ಚುತ್ತಿರುವ ಹೊತ್ತಿಗೆ, ಮಹಾನಗರಗಳಲ್ಲಿರುವ ವಿಮಾನ ನಿಲ್ದಾಣಗಳು ತುಂಬಿ ತುಳುಕುತ್ತಿವೆ. ದೇಶದಲ್ಲಿರುವ ಆರು ಮಹಾನಗರಗಳಲ್ಲಿ ಸದ್ಯ 26 ಕೋಟಿ ಪ್ರಯಾಣಿಕರು ಸಂಚರಿಸುತ್ತಿದ್ದಾರೆ. ಆದರೆ ಮುಂದಿನ ನಾಲ್ಕು ವರ್ಷಗಳಲ್ಲಿ ಈ ಸಂಖ್ಯೆ 42 ಕೋಟಿಗೆ ಏರಿಕೆಯಾಗಲಿದೆ ಎಂದು ಅಂದಾಜಿಸಲಾಗಿದೆ. ಹೆಚ್ಚುತ್ತಿರುವ ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ವಿಮಾನ ನಿಲ್ದಾಣಗಳನ್ನು ವಿಸ್ತರಿಸುವ ಕೆಲಸವೂ ಅಲ್ಲಲ್ಲಿ ಆಗುತ್ತಿದೆ. ಜತೆಗೆ ಹೆಚ್ಚುತ್ತಿರುವ ವಿಮಾನಗಳ ನಿಯಂತ್ರಣಕ್ಕೆ ಎಟಿಸಿಗಳಲ್ಲಿದ್ದ ಸಿಬ್ಬಂದಿ ಸಂಖ್ಯೆಯನ್ನು 2,700ರಿಂದ 4 ಸಾವಿರಕ್ಕೆ ಹೆಚ್ಚಳ ಮಾಡಲಾಗಿದೆ.

ಪ್ರಮುಖವಾಗಿ ಮುಂಬೈ, ದೆಹಲಿ ಹಾಗೂ ಚೆನ್ನೈ ವಿಮಾನ ನಿಲ್ದಾಣಗಳಿಗೆ ಗ್ರೀನ್‌ಫೀಲ್ಡ್ ಏರ್‌ಪೋರ್ಟ್‌ಗಳ ನಿರ್ಮಾಣ ಕಾರ್ಯ ಆಗುತ್ತಿದೆ. ಭಾರತದ ಈ ಬೆಳವಣಿಗೆಯು ಅಮೆರಿಕದ ಬೋಯಿಂಗ್ ಹಾಗೂ ಬ್ರಿಟನ್‌ನ ಏರ್‌ಬಸ್ ಕಂಪನಿಗಳ ಸಂಭ್ರಮಕ್ಕೆ ಕಾರಣವಾಗಿದೆ. ಮುಂದಿನ ಹತ್ತು ವರ್ಷಗಳಲ್ಲಿ ಸುಮಾರು 2 ಸಾವಿರ ಹೊಸ ವಿಮಾನಗಳು ಭಾರತದಲ್ಲಿ ಹಾರಾಟ ನಡೆಸುವ ಸಾಧ್ಯತೆ ಇದೆ. ಇದರಿಂದಾಗಿ ಅಮೆರಿಕ ಮತ್ತು ಚೀನಾ ಹೊರತುಪಡಿಸಿದರೆ, ಜಗತ್ತಿನಲ್ಲಿ ಅತಿ ಹೆಚ್ಚು ವಿಮಾನ ಖರೀದಿಸುವ ರಾಷ್ಟ್ರಗಳ ಸ್ಥಾನದಲ್ಲಿ ಭಾರತ ನಿಲ್ಲಲಿದೆ.

ದೇಶೀಯ ನೆಲೆಯಲ್ಲಿ ಕೈಗೆಟಕುವ ಬೆಲೆಗೆ ವಿಮಾನದ ಟಿಕೆಟ್ ಲಭಿಸುವಂತಾಗಿರುವುದರ ಜೊತೆಗೆ, ಇಂಧನದ ಮೇಲಿನ ಸೆಸ್ ಪ್ರಮಾಣ ತಗ್ಗಿಸಿದ್ದೂ ವಿಮಾನಯಾನ ಕ್ಷೇತ್ರದ ಬೆಳವಣಿಗೆಗೆ ಕಾರಣ. ದೇಶದ ಹಲವು ರಾಜ್ಯಗಳಲ್ಲಿ ವಿಮಾನ ಇಂಧನ ಮೇಲಿನ ತೆರಿಗೆಯಲ್ಲಿ ರಿಯಾಯಿತಿ ನೀಡಲಾಗಿದೆ. 19 ರಾಜ್ಯಗಳು ಶೇ. 1ರಿಂದ ಶೇ. 4ರಷ್ಟು ತೆರಿಗೆ ಕಡಿತ ಮಾಡಿವೆ. ಉಳಿದ ರಾಜ್ಯಗಳು ಶೇ. 1ರಿಂದ ಶೇ. 5ರವರೆಗೂ ತೆರಿಗೆ ತಗ್ಗಿಸಿರುವುದು, ಟಿಕೆಟ್ ಬೆಲೆ ಇಳಿಕೆಗೆ ಕಾರಣವಾಗಿವೆ.

## ವಿಮಾನಯಾನ ಕ್ಷೇತ್ರವನ್ನೂ ಬಿಡದ ಹಗರಣ

ಇಷ್ಟೆಲ್ಲಾ ಬೆಳವಣಿಗೆ ಕಾಣುತ್ತಿರುವ ನಾಗರಿಕ ವಿಮಾನಯಾನ ಕ್ಷೇತ್ರದಲ್ಲಿ ಎಲ್ಲವೂ ಸರಿ ಇದೆ ಎಂದೇನೂ ಅಲ್ಲ. ಆಗಾಗ ಹಗರಣಗಳ ಹೊಗೆಯೂ ಆಡುತ್ತಿರುತ್ತದೆ. ಜೆಟ್ ಏರ್‌ವೇಸ್‌ನ ಸಂಸ್ಥಾಪಕ ನರೇಶ್ ಗೋಯಲ್ ಸದ್ಯ ಜೈಲಿನಲ್ಲಿದ್ದಾರೆ. ವಿದೇಶಗಳಲ್ಲಿ ಆಸ್ತಿ ಖರೀದಿಸಲು ನಕಲಿ ಟ್ರಸ್ಟ್ ರಚಿಸಿದ ಆರೋಪದಲ್ಲಿ ಜಾರಿ ನಿರ್ದೇಶನಾಲಯ ಇವರನ್ನು ಬಂಧಿಸಿದೆ. ಇದರೊಂದಿಗೆ ಗೋಯಲ್‌ರ ₹538 ಕೋಟಿ ಮೌಲ್ಯದ ಆಸ್ತಿಯನ್ನು ವಶಕ್ಕೆ ಪಡೆದಿದೆ. ನರೇಶ್ ಒಬ್ಬರನ್ನೇ ಅಲ್ಲದೆ, ಅವರ ಪತ್ನಿ ಅನಿತಾ ಹಾಗೂ ಪುತ್ರ ನಿವಾನ್‌ನನ್ನೂ ಪ್ರಕರಣ ಸುತ್ತಿಕೊಂಡಿದೆ.

ಜೆಟ್ ಏರ್‌ವೇಸ್ ದೇಶದೊಳಗೆ ಹಾಗೂ ಅಂತರರಾಷ್ಟ್ರೀಯ ವಾಯುಮಾರ್ಗದಲ್ಲಿ ದೊಡ್ಡ ಹೆಸರಿರುವ ವಿಮಾನಯಾನ ಸಂಸ್ಥೆ. ಆದರೆ ಅಗತ್ಯ ಹಣಕಾಸು ಇಲ್ಲದೆ ಸಂಸ್ಥೆಯ ಕಾರ್ಯಾಚರಣೆಯೇ ಸ್ಥಗಿತಗೊಂಡಿದೆ. ಇದೇ ರೀತಿಯ ಪರಿಸ್ಥಿತಿ ಕಿಂಗ್‌ಫಿಶರ್ ಏರ್‌ಲೈನ್ಸ್, ಗೋ ಏರ್, ಏರ್ ಕಾರ್ನಿವಲ್, ಏರ್ ಕೋಸ್ಟಾ, ಏರ್ ಪೆಗಾಸಸ್ ಮತ್ತು ಏರ್ ಮಂತ್ರಾ ಸಂಸ್ಥೆಯದ್ದೂ ಆಗಿತ್ತು.







**ಮಂಗಳೂರು ಬಜ್ಪೆ ವಿಮಾನ ನಿಲ್ದಾಣ**

2024ರ ಫೆಬ್ರುವರಿಯಲ್ಲಿ ಒಟ್ಟು ಪ್ರಯಾಣಿಕರ ಸಂಖ್ಯೆ

**1.69** ಲಕ್ಷ

ಶೇ. **24.5**ರಷ್ಟು ಏರಿಕೆ.